ಶನಿವಾರ,15 ಡಿಸೆಂಬರ್ 2018 | ಪುಟಗಳು: 12+6+4 | ಬೆಲೆ: ₹ 5.00
www.vijaykarnataka.com
ಸಂಪುಟ: 18 | ಸಂಚಿಕೆ: 139
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ |
VK
ವಿಜಯ ಕರ್ನಾಟಕ



ವಿಡಬ್ಲ್ಯುಎಫ್ ವಿಶ್ವ ಟೂರ್: ಸೆಮಿಫೈನಲ್ಸ್ ಪ್ರವೇಶಿಸಿದ ಭಾರತದ ಪಿ.ವಿ. ಸಿಂಧೂ, ಸಮೀರ್ ವರ್ಮಾ P11

ನೇಪಾಳ ಭಾರತದ 100 ರೂ.ಗಿಂತ ಮೇಲಿನ ಕರೆನ್ಸಿ ಚಲಾವಣೆಯನ್ನು ದೇಶದಲ್ಲಿ ನಿಷೇಧಿಸಲು ನಿರ್ಧರಿಸಿದೆ. 200, 500, 2000 ರೂ. ನೋಟು ಬಳಕೆಗೆ ನಿರ್ಬಂಧಿಸಲಿದೆ. P07

ರಾಜಸ್ಥಾನದಲ್ಲಿ ಕೊನೆಗೂ ಸಿಎಂ ಪಟ್ಟ ಗಿಟ್ಟಿಸಿದ ಅಶೋಕ್ ಗೆಹ್ಲೋಟ್; ಸಚಿನ್ ಪೈಲಟ್ ಡಿಸಿಎಂ

# ತಾಂತ್ರಿಕ ಕೋರ್ಸ್‌ಗಳಿಗೆ ಎಐಸಿಟಿಇ ಮಾನ್ಯತೆ ಕಡ್ಡಾಯ

## ಡೀಮ್ಡ್ ವಿವಿಗಳಿಗೂ ಅನ್ವಯ | ತಾಂತ್ರಿಕ ಶಿಕ್ಷಣ ಇಲಾಖೆ ಸೂಚನೆ

■ **ಸ್ಟೀವನ್ ರೇಗೊ** ಮಂಗಳೂರು

ರಾಜ್ಯದ ವೃತ್ತಿಪರ ಶಿಕ್ಷಣ ಸಂಸ್ಥೆಗಳು ತಾಂತ್ರಿಕ ಕೋರ್ಸ್‌ಗಳಿಗೆ ಸಂಬಂಧಿಸಿದ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳನ್ನು ನಡೆಸಲು ಪ್ರತಿ ಸಾಲಿನಲ್ಲೂ ಹೊಸದಿಲ್ಲಿಯ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (ಎಐಸಿಟಿಇ) ಮಾನ್ಯತೆ ಪಡೆಯುವುದು ಈ ಸಾಲಿನಿಂದ ಕಡ್ಡಾಯವಾಗಲಿದೆ ಎಂದು ತಾಂತ್ರಿಕ ಶಿಕ್ಷಣ ಇಲಾಖೆ ಸೂಚನೆ ನೀಡಿದೆ.



ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಎಲ್ಲ ಡೀಮ್ಡ್ ವಿವಿಗಳು, ಸಂಯುಕ್ತ ಮತ್ತು ಖಾಸಗಿ ಕಾಲೇಜುಗಳು ಸಹ ತಾಂತ್ರಿಕ ಕೋರ್ಸ್ ಪ್ರವೇಶಕ್ಕೆ ಮಾನ್ಯತೆ ಪಡೆಯಬೇಕು. ಈ ಮೊದಲು ಡೀಮ್ಡ್ ವಿವಿಗಳು ನಾವು ಪ್ರತ್ಯೇಕವಾಗಿ ಡೀಮ್ಡ್ ಮಾನ್ಯತೆ ಪಡೆದುಕೊಂಡಿರುವುದರಿಂದ ಎಐಸಿಟಿಇ ಮಾನ್ಯತೆ ಅಗತ್ಯವಿಲ್ಲ ಎಂದು ವಾದ ಮಾಡಿತ್ತು. ಆದರೆ ಈಗ ಸಂಪೂರ್ಣವಾದ ಸ್ಥಿತಿ ನಿರ್ಮಾಣವಾಗಿದೆ. ಮುಖ್ಯವಾಗಿ ಎಲ್ಲ ಡೀಮ್ಡ್ ವಿವಿಗಳು ನಡೆಸುವ ಎಲ್ಲ ಕೋರ್ಸ್‌ಗಳಿಗೆ ಎಐಸಿಟಿಇ ಮಾನ್ಯತೆ ಕಡ್ಡಾಯವಾಗಲಿದೆ.

**ಪಾಲನೆ ತಪ್ಪಿದ್ದಲ್ಲಿ ಕ್ರಮ:** ಇದರ ಜತೆಗೆ ಮಾನ್ಯತೆ ಪಡೆದ ಬಳಿಕ ಅನುಮೋದಿತ ಇನ್‌ಟೇಕ್‌ನ ಆದೇಶ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಕೆ ಮಾಡಬೇಕು ಎಂದು ಹೊಸ ಸೂಚನೆಯಲ್ಲಿ ಮಾಹಿತಿ ನೀಡಲಾಗಿದೆ. ಈ ವಿಚಾರದಲ್ಲಿ ತಪ್ಪಿದ್ದಲ್ಲಿ ಅಂತಹ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಯಾವುದೇ ಮನವಿಯನ್ನು ಸ್ವೀಕಾರ ಮಾಡುವುದಿಲ್ಲ ಎಂದು ಸೂಚನೆಯಲ್ಲಿ ನೇರವಾಗಿ ತಿಳಿಸಿದೆ.

ಈ ಸಂಬಂಧ ಸುಪ್ರೀಂಕೋರ್ಟ್‌ನಲ್ಲಿ ದಾಖಲಾದ ಭಾರತಿದಾಸನ್ ವಿವಿ ಮತ್ತು ಇತರರ ವಿರುದ್ಧ ಹಾಗೂ ಎಐಸಿಟಿಇ ಮತ್ತು ಇತರರ ಪ್ರಕರಣದಲ್ಲಿ ತಾಂತ್ರಿಕ ಕೋರ್ಸ್‌ಗಳಿಗೆ ಎಐಸಿಟಿಇಯ ಪೂರ್ವ ಅನುಮೋದನೆ ಅಗತ್ಯ ಎನ್ನುವ ವಿಚಾರವನ್ನು ಪುಷ್ಟೀಕರಿಸಿದ ಬಳಿಕ ಈ ತೀರ್ಪಿನ ಆಧಾರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆ ಹೊಸ ಸೂಚನೆಯನ್ನು ಹೊರಡಿಸಿದೆ.

ಶೈಕ್ಷಣಿಕ ವರ್ಷ 2019-20ರ ಸಾಲಿನಿಂದ ಈಗಾಗಲೇ ಹಾಲಿ ನಡೆಸುತ್ತಿರುವ ಕೋರ್ಸ್‌ಗಳು ಹಾಗೂ ಅವುಗಳ ಪ್ರವೇಶಾತಿ ಸಂಖ್ಯೆ ಹಾಗೂ ಮುಂಬರುವ ವರ್ಷದಲ್ಲಿ ನಡೆಸುವ ಕೋರ್ಸ್ ಹಾಗೂ ಅಲ್ಲಿನ ಪ್ರವೇಶಾತಿ ಸಂಖ್ಯೆಯನ್ನು ಎಐಸಿಟಿಇಗೆ ಕಳುಹಿಸಬೇಕು. ಈ ಮೂಲಕ ಗುಣಮಟ್ಟದ ಶಿಕ್ಷಣ ನೀಡಲು ಸಹಕಾರಿಯಾಗಲಿದೆ ಎಂದು ಸೂಚನೆಯಲ್ಲಿ ತಿಳಿಸಲಾಗಿದೆ.

**ಡೀಮ್ಡ್ ವಿವಿಗಳಿಗೆ ಕಡಿವಾಣ:** ಹೊಸ ಸೂಚನೆಯ ಪ್ರಕಾರದಿಂದ ಡೀಮ್ಡ್ ವಿವಿಗಳು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ತಮಗೆ ಬೇಕಾದ ಕೋರ್ಸ್‌ಗಳನ್ನು ಮಾಡುವಂತೆ ಇರುವುದಿಲ್ಲ ಮಾಡಿದರೂ ಕೂಡಾ ಈ ಕೋರ್ಸ್‌ಗಳಿಗೆ ಎಐಸಿಟಿಇಯಿಂದ ಮಾನ್ಯತೆ ಇರಬೇಕು. ಈ ಹಿಂದೆ ಡೀಮ್ಡ್ ವಿವಿಗಳು ತಮಗೆ ಬೇಕಾದ ಕೋರ್ಸ್‌ಗಳನ್ನು ಮಾಡಿಕೊಂಡು ಮುಂದೆ ಸಾಗುತ್ತಿದ್ದರು ಈಗ ಈ ಎಲ್ಲ ವಿಚಾರಕ್ಕೆ ಕಡಿವಾಣ ಬೀಳಲಿದೆ. ಈಗಾಗಲೇ ತಾಂತ್ರಿಕ ಶಿಕ್ಷಣ ಇಲಾಖೆ ಈ ಕುರಿತು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುತ್ತಾ ಇಮೇಲ್‌ಗಳ ಮೂಲಕ ಸಂಬಂಧಪಟ್ಟ ಸಂಸ್ಥೆಗಳ ಮುಖ್ಯಸ್ಥರನ್ನು ಎಚ್ಚರ ಮಾಡುತ್ತಾ ಸಾಗುತ್ತಿದೆ.

uPVC Windows
Royce uPVC Doors & Windows
Showroom: Hotel Karthik Estate Complex, Ambalpady Junction, NH 66, UDUPI - 576103, Karnataka.
Call Us: 8884-2222-70 | www.roycewindows.com

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಶನಿವಾರ, ಡಿಸೆಂಬರ್ 15, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು

S. L. SHET
OPP MANGALA SWIM
Kulur Ferry Road, Mangalo

**ಶಿಕ್ಷಣ** | ಸಾಂಸ್ಕೃತಿಕ ಕಾರ್ಯಕ್ರಮ, ಕ್ರೀಡಾಕೂಟ ಉದ್ಘಾಟನೆ

# ಮೌಲ್ಯಯುತ ಶಿಕ್ಷಣ ಪ್ರಾಧ್ಯಾಪಕರ, ಸಂಸ್ಥೆಗಳ ಜವಾಬ್ದಾರಿ: ಡಾ। ಈಶ್ವರ್



ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಕ್ರೀಡಾಕೂಟದ ಉದ್ಘಾಟನೆ ನಡೆಯಿತು.

**ಮಹಾನಗರ**, ಡಿ. 14: ಯುವ ಜನಾಂಗ ದೇಶದ ಮುಂದಿನ ಭವಿಷ್ಯ. ಈ ನಿಟ್ಟಿನಲ್ಲಿ ಮೌಲ್ಯಯುತ ಶಿಕ್ಷಣ ನೀಡುವುದು ಪ್ರಾಧ್ಯಾಪಕರು ಹಾಗೂ ಶಿಕ್ಷಣ ಸಂಸ್ಥೆಗಳ ಜವಾಬ್ದಾರಿ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿ ಡಾ। ಈಶ್ವರ್ ಹೇಳಿದರು.

ಮಂಗಳೂರು ಮೀನುಗಾರಿಕಾ ಕಾಲೇಜು ಆಶ್ರಯದಲ್ಲಿ ಎಕ್ಕೂರಿನ ಮೀನಗಾರಿಕಾ ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ನಡೆದ ಅಖಿಲ ಭಾರತ ಮೀನುಗಾರಿಕೆ ಕಾಲೇಜುಗಳ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ಪುಸ್ತಕದಲ್ಲಿರುವ ವಿಷಯಗಳನ್ನು ಮಾತ್ರ ಅಧ್ಯಯನ ಮಾಡಿದರೆ ಸಾಲದು ಎಂಬ ಕಾರಣಕ್ಕಾಗಿ ವಿವಿಧ ಸಂಸ್ಥೆಗಳು ವಿದ್ಯಾರ್ಥಿಗಳಿಗಾಗಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಮಂಗಳೂರು ವಿಶ್ವವಿದ್ಯಾನಿಲಯವು ಪ್ರಥಮ ಬಾರಿಗೆ ಸಾಂಸ್ಕೃತಿಕ ಮತ್ತು ಕ್ರೀಡಾ ನಿಯಮ ಜಾರಿ ಮಾಡಿದೆ. ವಿದ್ಯಾರ್ಥಿಗಳನ್ನು ಇದನ್ನು ಸದ್ಬಳಕೆ ಮಾಡಿಕೊಂಡು ತಮ್ಮ ಪ್ರತಿಭೆಗಳನ್ನು ಅನಾವರಣಗೊಳಿಸಬೇಕು ಎಂದು ತಿಳಿಸಿದರು.

ಮಂಗಳೂರು ಮೀನುಗಾರಿಕೆ ಕಾಲೇಜಿನ ಡೀನ್ ಡಾ। ಎಚ್. ಶಿವಾನಂದ ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಮೀನುಗಾರಿಕೆ ಕಾಲೇಜಿನ ಪ್ರಾಧ್ಯಾಪಕ ಗಂಗಾಧರ ಗೌಡ ಉಪಸ್ಥಿತರಿದ್ದರು.

ಮೀನುಗಾರಿಕೆ ಕಾಲೇಜಿನ ಎಫ್ ಆರ್‌ಎಂ ವಿಭಾಗದ ಮುಖ್ಯಸ್ಥ ಡಾ। ಶಿವಪ್ರಕಾಶ್ ಎಸ್.ಎಂ. ಸ್ವಾಗತಿಸಿದರು.

ಅಕ್ವಾಟಿಕ್ ಬಯೋಲಜಿ ವಿಭಾಗದ ಪ್ರಾಧ್ಯಾಪಕ ಡಾ। ಶಿವಕುಮಾರ್ ಮಗದ ಅವರು ವಂದಿಸಿದರು. ಕಾಲೇಜು ಪ್ರಾಧ್ಯಾಪಿಕೆ ಮೃದುಲಾ ರಾಜೇಶ್ ಮತ್ತು ವಂದನಾ ನಿರೂಪಿಸಿದರು.

### ಅವಕಾಶ ಬಳಸಿ

ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ। ಶ್ರೀನಿವಾಸ ರಾವ್ ಅವರು ಮಾತನಾಡಿ, ಶಿಕ್ಷಣ ಸಂಸ್ಥೆಗಳು ಆಯೋಜಿಸುವ ವಿವಿಧ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕು. ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವ ಮೂಲಕ ವಿದ್ಯಾರ್ಥಿಗಳಿಗೆ ಪ್ರತಿಭೆ ಅನಾವರಣದ ಜತೆಗೆ ಸಂಸ್ಕೃತಿ ವಿನಿಮಯ ಮಾಡಿಕೊಳ್ಳಲು ಅವಕಾಶವಿದೆ. ವಿದ್ಯಾರ್ಥಿಗಳು ಈ ಅವಕಾಶದ ಸದುಪಯೋಗ ಮಾಡಬೇಕು ಎಂದರು.

ಶನಿವಾರ,15 ಡಿಸೆಂಬರ್ 2018 | ಪುಟಗಳು: 12+6+4 | ಬೆಲೆ: ₹ 5.00
www.vijaykarnataka.com
ಸಂಪುಟ: 18 | ಸಂಚಿಕೆ: 139

VK
# ವಿಜಯ ಕರ್ನಾಟಕ

ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ |



ಬಿಡಬ್ಲ್ಯುಎಫ್ ವಿಶ್ವ ಟೂರ್: ಸೆಮಿಫೈನಲ್ಸ್ ಪ್ರವೇಶಿಸಿದ ಭಾರತದ ಪಿ.ವಿ. ಸಿಂಧೂ, ಸಮೀರ್ ವರ್ಮಾ P11

ನೇಪಾಳ ಭಾರತದ 100 ರೂ.ಗಿಂತ ಮೇಲಿನ ಕರೆನ್ಸಿ ಚಲಾವಣೆಯನ್ನು ದೇಶದಲ್ಲಿ ನಿಷೇಧಿಸಲು ನಿರ್ಧರಿಸಿದೆ. 200, 500, 2000 ರೂ. ನೋಟು ಬಳಕೆಗೆ ನಿರ್ಬಂಧಿಸಲಿದೆ. P07

ರಾಜಸ್ಥಾನದಲ್ಲಿ ಕೊನೆಗೂ ಸಿಎಂ ಪಟ್ಟ ಗಿಟ್ಟಿಸಿದ ಅಶೋಕ್ ಗೆಹ್ಲೋಟ್; ಸಚಿನ್ ಪೈಲಟ್ ಡಿಸಿಎಂ

# ಮೀನುಗಾರಿಕೆ ಕಾಲೇಜಿನಲ್ಲಿ ಮತ್ಸ್ಯ ಪ್ರದರ್ಶನ

**ವಿಕ ಸುದ್ದಿಲೋಕ** ಮಂಗಳೂರು

ಎಕ್ಕೂರಿನ ಮೀನುಗಾರಿಕೆ ಕಾಲೇಜಿನ 50ನೇ ವರ್ಷದ ಸುವರ್ಣ ಮಹೋತ್ಸವ ಪ್ರಯುಕ್ತ ಮತ್ಸ್ಯ ವಸ್ತುಪ್ರದರ್ಶನ ಶುಕ್ರವಾರ ಆರಂಭಗೊಂಡಿದ್ದು, ಡಿ.15 ರಂದು ಕೂಡ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿದೆ.

ಮೀನುಗಾರಿಕಾ ಕಾಲೇಜಿನ ಜಲ ಕೃಷಿ, ಜಲ ಪರಿಸರ ನಿರ್ವಹಣೆ, ಮತ್ಸ್ಯ ಸಂಪನ್ಮೂಲ ನಿರ್ವಹಣೆ, ಜಲ ಜೀವಿ ಆರೋಗ್ಯ ನಿರ್ವಹಣೆ, ಮೀನು ಸಂಸ್ಕರಣೆ ಮತ್ತು ಮೀನುಗಾರಿಕೆ ಅಭಿಯಂತರ ತಾಂತ್ರಿಕ ವಿಭಾಗಗಳು, ದ.ಕ. ಜಿಲ್ಲೆಯ ಏಕೈಕ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಕೇಂದ್ರೀಯ ಮತ್ಸ್ಯ ತಾಂತ್ರಿಕ ಸಂಸ್ಥೆ, ಸಾಗರೋತ್ಪನ್ನ ರಫ್ತು ಪ್ರಾಧಿಕಾರ, ಕೇಂದ್ರೀಯ ಕಡಲ ಮತ್ಸ್ಯ ಸಂಶೋಧನಾ ಸಂಸ್ಥೆ, ಮೀನುಗಾರಿಕೆ ಇಲಾಖೆ, ಕಡಲ ನಿಯಂತ್ರಣ ವಲಯ, ಕೇಂದ್ರೀಯ ಹಿನ್ನೀರು ಜಲಕೃಷಿ ಸಂಸ್ಥೆ ಮುಂತಾದ ಸಂಸ್ಥೆಗಳ ಮಳಿಗೆಗಳ ಪ್ರದರ್ಶನದ ಜತೆ ಅಕ್ವೇರಿಯಂ ಗ್ಯಾಲರಿ ಆಕರ್ಷಣೀಯವಾಗಿತ್ತು. ಮಂಗಳೂರಿನ ಸುಮಾರು 40 ಶಾಲಾ- ಕಾಲೇಜುಗಳಿಂದ ವಿದ್ಯಾರ್ಥಿಗಳು ಆಗಮಿಸಿ ವೀಕ್ಷಿಸಿದರು. ಕೃಷಿ ವಿಜ್ಞಾನ ಕೇಂದ್ರದ ಮಳಿಗೆಯನ್ನು ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲ್ ಡಾ. ಶ್ರೀನಿವಾಸ ರಾವ್ ಉದ್ಘಾಟಿಸಿದರು. ಮಂಗಳೂರು ವಿವಿ ಕುಲಪತಿ ಡಾ. ಈಶ್ವರ್, ಕಾಲೇಜಿನ ಡೀನ್ ಡಾ. ಎಚ್. ಶಿವಾನಂದ ಮೂರ್ತಿ, ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥ ಡಾ. ಎ.ಟಿ. ರಾಮಚಂದ್ರ ನಾಯ್ಕ ಉಪಸ್ಥಿತರಿದ್ದರು.




# ಮೌಲ್ಯಯುತ ಶಿಕ್ಷಣ ಪ್ರಾಧ್ಯಾಪಕರ ಜವಾಬ್ದಾರಿ

## ಮೀನುಗಾರಿಕೆ ಕಾಲೇಜುಗಳ ಕ್ರೀಡಾಕೂಟ ಉದ್ಘಾಟಿಸಿ, ಡಾ. ಈಶ್ವರ್

**ಮಂಗಳೂರು:** ಭಾರತವು ಶೇ.60ಕ್ಕಿಂತ ಹೆಚ್ಚು ಯುವಜನತೆಯ ಮೂಲಕ ಯುವ ಭಾರತವಾಗಿದ್ದು, ಭವಿಷ್ಯದ ದೃಷ್ಟಿಯಿಂದ ಮೌಲ್ಯಯುತ ಶಿಕ್ಷಣ ನೀಡುವುದು ಪ್ರಾಧ್ಯಾಪಕರ ಮತ್ತು ಶಿಕ್ಷಣ ಸಂಸ್ಥೆಗಳ ಜವಾಬ್ದಾರಿ ಎಂದು ಮಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ. ಈಶ್ವರ್ ಹೇಳಿದರು.

ಎಕ್ಕೂರು ಮೀನುಗಾರಿಕೆ ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ಮಂಗಳೂರು ಮೀನುಗಾರಿಕೆ ಕಾಲೇಜು ಆಶ್ರಯದಲ್ಲಿ ಆಯೋಜಿಸಿರುವ ಅಖಿಲ ಭಾರತ ಮೀನುಗಾರಿಕೆ ಕಾಲೇಜುಗಳ ಸಾಂಸ್ಕೃತಿಕ ಮತ್ತು ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.




ಮಂಗಳೂರು ಮೀನುಗಾರಿಕೆ ಕಾಲೇಜಿನ ಡೀನ್ ಡಾ. ಎಚ್. ಶಿವಾನಂದ ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ಶ್ರೀನಿವಾಸ ರಾವ್, ಮೀನುಗಾರಿಕೆ ಕಾಲೇಜಿನ ಪ್ರಾಧ್ಯಾಪಕ ಗಂಗಾಧರ ಗೌಡ ಉಪಸ್ಥಿತರಿದ್ದರು. ಮೀನುಗಾರಿಕೆ ಕಾಲೇಜಿನ ಎಫ್ಆರ್ಎಂ ವಿಭಾಗದ ಮುಖ್ಯಸ್ಥ ಡಾ. ಶಿವಪ್ರಕಾಶ್ ಎಸ್.ಎಂ. ಸ್ವಾಗತಿಸಿದರು. ಅಕ್ವೇಟಿಕ್ ಬಯೋಲಜಿ ವಿಭಾಗದ ಪ್ರಾಧ್ಯಾಪಕ ಡಾ. ಶಿವಕುಮಾರ್ ಮಗದ ವಂದಿಸಿದರು. ಕಾಲೇಜು ಪ್ರಾಧ್ಯಾಪಕಿ ಮೃದುಲಾ ರಾಜೇಶ್ ಮತ್ತು ವಂದನಾ ಕಾರ್ಯಕ್ರಮ ನಿರೂಪಿಸಿದರು.